ಆದರೆ ಮತ್ತಿಹಳ್ಳಕ್ಕೆ ೩೨ ಸಾವಿರ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದಾಗ ರೂ ೩,೨೦೦ ಮಾತ್ರ ಕಟ್ಟಿದ್ದಾರೆ. ಸಾಸಿವೆ ಹಳ್ಳಕ್ಕೆ ೩೨ ಸಾವಿರ ಎಸ್ಟಿಮೇಟ್ ಮಾಡಿದಾಗ ಅವರು ರೂ ೨,೭೦೦ ಮಾತ್ರ ಕಟ್ಟಿದ್ದಾರೆ. ಆದರೆ ಸರ್ಕಾರದ ಆದೇಶವೇನಿದೆ ಎಂದರೆ ೧೦ ಪರ್ಸೆಂಟ್ ಆದರೂ ಸಂಪೂರ್ಣವಾಗಿ ಯಾರು ಕಟ್ಟಿದ್ದಾರೆ ಅವರಿಗೆ ಅದ್ಯತೆ ಮೇಲೆ ಕೊಡಬೇಕೆಂದು ಮಾಡಿದ್ದೇವೆ. ಅವರು ಭಾಗಶ: ಕಟ್ಟಿರತಕ್ಕದ್ದನ್ನು ಗಮನದಲ್ಲಿಟ್ಟುಕೊಂಡು ಮುಂದೆ ನಾವು ೧೯೮೨–೮೩ರ ಹೊತ್ತಿಗೆ ತೆಗೆದುಕೊಳ್ಳತಕ್ಕ ಸಂಧರ್ಭದಲ್ಲಿ ಪರಿಶೀಲನೆ ಮಾಡುತ್ತೇವೆ ಡಿ.ಡಿ.ಸಿ. ಯವರಿಂದ ರೆಕ್‌ಮೆಂಡೇಷನ್ ಆಗಿ ಬರಬೇಕು ಆ ರೀತಿ ಬಂದಂಥವುಗಳಿಗೆ ನಾವು ಮೊದಲು ಆದ್ಯತೆ ಕೊಟ್ಟು ಮಾಡುತ್ತಿದ್ದೇವೆ. ಆದರೆ ಇದರ ಬಗ್ಗೆ ಬಂದಿಲ್ಲ, ಆದರೂ ಸಹ ಭಾಗಶಃ ಕಟ್ಟಿರುವುದರಿಂದ ಅದನ್ನು ಗಮನದಲ್ಲಿಟ್ಟುಕೊಂಡು ೧೯೮೨–೮೩ ನೇ ಸಾಲಿಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್. ಕರಿಬಸವನಗೌಡ.—ಕುಮಾರ ಹಳ್ಳ ತಾಂಡದ ಬಗ್ಗೆ ಮಾಹಿತಿ ಕೊಟ್ಟಿದ್ದೀರಿ ಅದಕ್ಕಾಗಿ ನಾನು ಸ್ವಾಗತ ಮಾಡುತ್ತೇನೆ. ಆದರೆ ೧೯೭೫–೭೬ರಲ್ಲಿಯೇ ಮತ್ತಿಹಳ್ಳಿ ಮತ್ತು ಸಾಸಿವೆ ಹಳ್ಳಿ ಯವರು ದುಡ್ಡು ಕಟ್ಟಿದ್ದರೂ ಸಹ ಇಷ್ಟು ಆಲಸ್ಯ ಏತಕ್ಕೆ ಮಾಡುತ್ತಿದ್ದೀರಿ. ಹಿಂದೆ ಅಧಿಕಾರಿಗಳು ಪಂಚಾಯಿತಿಯವರನ್ನು ಕೇಳಿದಾಗ, ಅಲ್ಲಿಯ ಪಂಚಾಯಿತಿಯವರು ನಮಗೆ ಡೈರೆಕ್ಟ್ ಪಂಪಿಂಗ್ ಸೆಟ್ ಬೇಡ, ಓವರ್ ಹೆಡ್ ಟ್ಯಾಂಕ್‌ಗಳನ್ನು ಕೊಡಿ ಎಂದು ಕೇಳಿದ್ದರು, ಅದರ ಬಗ್ಗೆ ಅಧಿಕಾರಿಗಳು ಆದೇಶ ನೀಡುತ್ತೇವೆಂದು ಹೇಳಿದ್ದರು, ಆದರೆ ಅಲ್ಲಿಂದ ಇಲ್ಲಿಯವರೆಗೆ ನಿಮ್ಮ ಅಧಿಕಾರಿಗಳು ಏನು ಮಾಡಿದರು? ಇದರ ಬಗ್ಗೆ ತಾವು ಸೂಕ್ತವಾದ ವಿವರವನ್ನು ನೀಡಬೇಕು.

ಶ್ರೀ ಬಿ. ರಾಮಯ್ಯ.—ಅಧ್ಯಕ್ಷರೇ, ಈ ಪ್ರಶ್ನೆಗೆ ನಾನು ಹಿಂದೆ ಸಹ ಉತ್ತರ ಹೇಳಿದ್ದೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚಿತವಾಗಿ ೧ ವರ್ಷದಲ್ಲಿ ೧೭೫–೨೦೦ ಯೋಜನೆಗಳನ್ನು ಮಾಡಿದ್ದರು. ಆದರೆ ನಮ್ಮ ಮಾನ್ಯಮುಖ್ಯಮಂತ್ರಿಗಳವರು ಬೆಳಗಾಂನಲ್ಲಿ ನಡೆದಂಥ ಸಚಿವ ಸಂಪುಟದ ಸಭೆಯಲ್ಲಿ ೮೦೦ ಯೋಜನೆಗಳನ್ನು ಕೇವಲ ಒಂದೇ ದಿವಸದಲ್ಲಿ ಬಿಡುಗಡೆ ಮಾಡಿದ್ದಾರೆ. ಆನಂತರ ಸುಮಾರು ೨೦೦ ಯೋಜನೆಗಳನ್ನು ಬಿಡುಗಡೆ ಮಾಡಿದ್ದೇವೆ. ಒಟ್ಟು ೧,೦೦೦ ಯೋಜನೆ ಗಳನ್ನು ನಾವು ೧೯೮೧–೮೨ರಲ್ಲಿ ಈ ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಯಲ್ಲಿ ಕೊಟ್ಟು ಒಂದು ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ. ಆದುದರಿಂದ ಅವುಗಳನ್ನು ಉದ್ದೇಶಪೂರ್ವಕ ವಾಗಿ ಕೈ ಬಿಟ್ಟಿಲ್ಲ, ತಾಂತ್ರಿಕವಾಗಿ ಕೆಲವು ತೊಂದರೆಗಳು ಇತ್ತು, ಮತ್ತೆ ಶೇಕಡ ೧೦ರಂತೆ ನಮ್ಮ ರಾಜ್ಯ ದಲ್ಲಿರತಕ್ಕ ೧೭೫ ತಾಲ್ಲೂಕ್ ಅಭಿವೃದ್ಧಿ ಮಂಡಲಿಗಳಿಂದ ಹಣ ಪಾವತಿ ಮಾಡಿದ್ದಾರೆ, ಆದುದರಿಂದ ಅದ್ಯತೆ ಮೇಲೆ ಮಾಡಿಕೊಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಈಗಾಗಲೇ ಹೇಳಿದ್ದೇನೆ.

ಶ್ರೀ ಎನ್. ಕರಿಬಸವನ ಗೌಡ.—ಬಹಳ ಸಂತೋಷ, ೧,೦೦೦ ಯೋಜನೆಗಳನ್ನು ಈಗಾಗಲೇ ನಮ್ಮ ರಾಜ್ಯದಲ್ಲಿ ಬಿಡುಗಡೆ ಮಾಡಿದ್ದೀರಿ ಎಂದು ಹೇಳಿದ್ದೀರಿ ಅದಕ್ಕಾಗಿ ಸ್ವಾಗತ ಮಾಡುತ್ತೇನೆ. ಆದರೆ ನನ್ನ ಕ್ಷೇತ್ರದಲ್ಲಿ ಏತಕ್ಕೆ ಹೆಚ್ಚಿಗೆ ಬಿಡುಗಡೆ ಮಾಡಿಲ್ಲ? ನಮ್ಮಲ್ಲಿಯೇ ಲೋಪ ದೊಷಗಳಿರಬಹುದು, ಕೊನೆಯ ಪಕ್ಷ ೧೯೮೨–೮೩ರಲ್ಲಿ ಮಾಡಿಸಿ ಕೊಡುತ್ತೇನೆ ಎನ್ನುವ ಆಶ್ವಾಸನೆ ಕೊಡುತ್ತೀರಾ?

ಶ್ರೀ ಬಿ. ರಾಮಯ್ಯ.—೧೯೮೨-೮೩ರಲ್ಲಿ ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ತೀವ್ರವಾಗಿ ಪರಿಶೀಲನೆ ಮಾಡುವುದಕ್ಕೆ ಮನಸ್ಸಿನಲ್ಲಿಟ್ಟುಕೊಂಡು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Sanction of H.B.A. and other Advances to I.A.S. Officers.

661 SRI G. RAJU GOWDA (Hanur).—Will the Chief Minister be pleased to state:—

(*a*) the number of I.A.S. Officers in the State;

(*b*) the amount disbursed to these Officers per month in the form of salary;

(*c*) the amount of advance sanctioned to the I.A.S. Officers towards House Building Advance and Motor Car Advance during 1980-81; the number of Officers benefitted?

SRI R. GUNDU RAO (Chief Minister).—

(*a*) 230.

(*b*) About Rs. 4.5. lakhs per month.

(*c*) During 1980-81 a total sum of Rs. 4,70,000 has been sanctioned to six I.A.S. Officers as House Building Advance and no advance for purchase of motor car has been sanctioned to any I.A.S. Officer.

ಶ್ರೀ ಜಿ. ರಾಜೂಗೌಡ.—ಅಧ್ಯಕ್ಷರೇ, ನನ್ನ ಪ್ರಶ್ನೆಯ ಉತ್ತರದಲ್ಲಿ ಐ.ಎ.ಎಸ್. ಅಧಿಕಾರಿಗಳು ೨೦೩ ಎಂದಿದೆ, ಇಂಗ್ಲೀಷ್‌ನಲ್ಲಿ ೨೩೦ ಎಂದು ಇದೆ ದಯವಿಟ್ಟು ಯಾವುದು ಸರಿ ಎಂದು ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್.—ನವ್ಮ ರಾಜ್ಯದಲ್ಲಿರತಕ್ಕಂಥವರು ೨೩೦ ಆದರಲ್ಲಿ ೨೦೧ ಜನ ಕೆಲಸ ಮಾಡುತ್ತಿದ್ದಾರೆ. ಬಾಕಿದು ಖಾಲಿ ಇದೆ.

ಶ್ರೀ ಜಿ. ರಾಜೂಗೌಡ.—೨೦೧ ಜನ ಐ.ಎ.ಎಸ್. ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ ಅವರಿಗೆ ತಿಂಗಳಿಗೆ ಡಿ.ಎ. ಎಷ್ಟು ಕೊಡಬೇಕು ಮತ್ತು ಸೂಪರ್ ಟೈಮ್ ಸ್ಕೇಲ್ ಎಷ್ಟು ಇಟ್ಟಿದ್ದೀರಿ ಸ್ವಾಮಿ?

ಶ್ರೀ ಆರ್. ಗುಂಡೂರಾವ್.—ಆ ವಿವರ ನನ್ನ ಹತ್ತಿರ ಈಗ ಇಲ್ಲ ಬೇಕಾದರೆ ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ತರಿಸಿ ಕೊಡುತ್ತೇನೆ.

ಶ್ರೀ ಜಿ. ರಾಜೂಗೌಡ.—ಮೂಲ ವೇತನ ನಾಲ್ಕುವರೆ ಸಾವಿರ ಎಂದು ಹೇಳಿದ್ದೀರಿ, ಅವರಿಗೆ ಎಷ್ಟು ಡಿ.ಎ. ಕೊಡುತ್ತಿದ್ದೀರಿ ಸ್ವಾಮಿ?

ಶ್ರೀ ಆರ್. ಗುಂಡೂರಾವ್.—ತಿಂಗಳಿಗೆ ಟಿ.ಎ., ಡಿ.ಎ. ಎಲ್ಲಾ ಎಷ್ಟು ಸಿಗುತ್ತದೆಂದು ಎಲ್ಲಿ ವಿವರಣೆ ಸಿಗುತ್ತದೆ.

ಶ್ರೀ ಜಿ. ರಾಜೂಗೌಡ.—ತಾಂತ್ರಿಕ ಪರಿಣಿತರು ಅಲ್ಲದೇ ಇರತಕ್ಕಂಥ ಎಷ್ಟು ಜನ ಐ.ಎ.ಎಸ್. ಅಧಿಕಾರಿಗಳು ನಿಮ್ಮ ಇಲಾಖೆಯಲ್ಲಿದ್ದಾರೆ? ನಾನಾ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಬಿದ್ದಿರುವಾಗ ಅಡಿಷನಲ್ ಕಾರ್ಯದರ್ಶಿ, ಸ್ಪೆಷಲ್ ಸೆಕ್ರಟರಿಗಳನ್ನು ನಿರ್ಮಾಣ ಮಾಡುವುದರ ಔಚಿತ್ಯವಾದರೂ ಏನಿತ್ತು?

ಶ್ರೀ ಆರ್. ಗುಂಡೂರಾವ್.—ಆ ಪ್ರಶ್ನೆ ಉದ್ಭವವಾಗುವುದಿಲ್ಲ.

Development of Roads by P.W.D. in Tiptur Taluk.

897 SRI V. L. SHIVAPPA (Tiptur).—Will the Minister for Public Works be pleased to state.

whether the Government have proposed to develop the road from Hassan border leading to Masavanaghatta, Kemparahalli, Bajugararu, Nunvaru Kurabarahalli Lingadevarahalli, Channarayapatna upto link Road of Tiptur duly including them under the control of Public Works Department?

SRI KAGODU THIMMAPPA (Minister for Public Works) -This matter is under examination.

ಶ್ರೀ ವಿ.ಎಲ್. ಶಿವಪ್ಪ.—ಬಿ.ಎಚ್. ರೋಡ್ ಒಂದು ಮಾತ್ರ ವಿಶಾಲವಾಗಿದೆ. ಮಿಕ್ಕ ಇಂಟೀರಿಯರ್ ರೋಡ್‌ಗಳು ವಿಸ್ತಾರವಾಗಿಲ್ಲ, ಇದರಿಂದ ಅನೇಕ ಜನಕ್ಕೆ ತೊಂದರೆಯಾಗುತ್ತಿದೆ ಎನ್ನುವುದನ್ನು ಗವಂನದಲ್ಲಿಟ್ಟುಕೊಂಡು ಆದ್ಯತೆ ಮೇಲೆ ತೆಗೆದುಕೊಳ್ಳುತ್ತೀರಾ?